**ಸಾಕ್ಷಿಯನ್ನು ದಿಃ 17.09.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಿಮ್ಮ ಕುಟುಂಬದ ಮೂಲ ಪುರುಷನ ಹೆಸರು ಏನು ಎಂದರೆ, ದಾಸಯ್ಯ. ಸದರಿ ದಾಸಯ್ಯನ ತಂದೆ ಹೆಸರು ನನಗೆ ಗೊತ್ತಿಲ್ಲ.

2. ಸದರಿ ದಾಸಯ್ಯನ ತಂದೆ ಹೆಸರು ದಾಸೇಗೌಡ ಎಂದು ನೀವು ನಿಮ್ಮ ವಕೀಲರಿಗೆ ಹೇಳಿ ಬರೆಸಿದ್ದೀರಾ ಎಂದರೆ, ಬರೆಸಿದ್ದೇವೆ.

3. ದಾಸೇಗೌಡರ ವಂಶವೃಕ್ಷದ ಬಗ್ಗೆ ನನಗೆ ಮಾಹಿತಿ ಇದೆ.

4. ದಾಸೇಗೌಡರಿಗೆ ದಾಸ ಮತ್ತು ತಿಮ್ಮಪ್ಪ ಎಂಬ ಇಬ್ಬರು ಮಕ್ಕಳು.

5. ತಿಮ್ಮಪ್ಪನ ಪತ್ನಿ ಹೆಸರು ಗಂಗಮಾಳಮ್ಮ. ತಿಮ್ಮಪ್ಪನಿಗೆ ಪುಟ್ಟ, ಸರೋಜ, ಶ್ರೀನಿವಾಸ, ಶಿವಣ್ಣ, ರಾಜ ಹಾಗೂ ಗಣೇಶ ಎಂಬ 6 ಜನ ಮಕ್ಕಳು. ದಾವಾ ಸ್ವತ್ತಿನ ಮೇಲೆ ಸದರಿಯವರಿಗೂ ಸಹ ಹಕ್ಕು ಇದೆಯಾ ಎಂದರೆ, ಇದೆ. ಅವರೂ ಸಹ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರಾ ಎಂದರೆ, ಇದ್ದೇವೆ.

6. ಈ ದಾವೆ ಹಾಕುವ ಕಾಲದಲ್ಲಿ ಅವರನ್ನೂ ಸಹ ಪಕ್ಷಗಾರರಾಗಿ ಮಾಡುವಂತೆ ನಿಮ್ಮ ವಕೀಲರಿಗೆ ಮಾಹಿ ನೀಡಿದ್ದೀರಾ ಎಂದರೆ, ನೀಡಿದ್ದೇವೆ.

7. ಕಳೆದ 40 ವರ್ಷದಿಂದಲೂ ಖಾತೆ, ಪಹಣಿ ಗಳು ಶ್ರೀನಿವಾಸ ರವರ ತಂದೆ ಲಕ್ಕಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ, ಸರಿಯಲ್ಲ. ಲಕ್ಕಪ್ಪನ ತಂದೆ ಹೆಸರು ಕಾಳ. ಸದರಿ ಕಾಳ ರವರ ತಂದೆ ಹೆಸರು ನನಗೆ ಗೊತ್ತಿಲ್ಲ.

8. ಕಾಳನ ತಂದೆ ಹೆಸರು ದಾಸ @ ದಾಸಯ್ಯ ಎಂದು ನಿಮ್ಮ ವಕೀಲರಿಗೆ ಮಾಹಿತಿ ನೀಡಿದ್ದೀರಾ ಎಂದರೆ, ಕೊಟ್ಟಿದ್ದೇವೆ.

9. ದಾವಾ ಸ್ವತ್ತು ಮೂಲತಃ ಕಾಳ ಬಿನ್ ದಾಸಯ್ಯ ರವರ ಹೆಸರು ಖಾತೆ ಮತ್ತು ಪಹಣಿಯಲ್ಲಿ ನಮೂದು ಇದೆ ಎಂದರೆ ಸರಿ. ಆ ನಂತರ ಅದು ರಾಜು ರವರ ತಾಯಿ ಕಾಳಮ್ಮ ರವರ ಹೆಸರಿಗೆ ಖಾತೆ ಆಗಿ ನಂತರ ಅವರ ಮಕ್ಕಳ ಹೆಸರಿಗೆ ಖಾತೆ ಆಯಿತು ಎಂದರೆ, ಅವರು ಬರೆಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

10. ಈ ದಾವೆಯಲ್ಲಿ ಸದರಿಯವರ ಹೆಸರು ರದ್ದುಗೊಳಿಸಿ ಕಂದಾಯ ಅಧಿಕಾರಿಗಳು ನಿಮ್ಮ ಹೆಸರಿಗೆ ಖಾತೆ ಮಾಡಿಕೊಡಬೇಕು ಎಂದು ಪರಿಹಾರ ಕೋರಿದ್ದೀರಾ ಎಂದರೆ, ಕೋರಿದ್ದೇವೆ. ಆ

ಕಾರಣಕ್ಕೆ ಕಂದಾಯ ಅಧಿಕಾರಿಗಳನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇತ್ತಾ ಎಂದರೆ, ಇಲ್ಲ.

11. ದಾಸೇಗೌಡರ ಇಬ್ಬರು ಮಕ್ಕಳ ಪೈಕಿ ದಾಸ ಹಿರಿಮಗ. ತಿಮ್ಮಪ್ಪ ಕಿರಿಮಗ. ಅವರು ನನ್ನ ತಂದೆ. ದಾಸಯ್ಯನ ಪತ್ನಿ ಹೆಸರು ಏನು ಎಂದರೆ ಅವರು ಮದುವೆ ಆಗಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಸಯ್ಯ ರವರು ಯಾವ ದಿನಾಂಕದಂದು ಹುಟ್ಟಿದರು ಮತ್ತು ಯಾವ ದಿನಾಂಕದಂದು ಮೃತರಾದರು ಎಂದು ನನಗೆ ಗೊತ್ತಿಲ್ಲ. ಆದರೆ 1956 ರಲ್ಲಿ ಮೃತರಾಗಿದ್ದಾರೆ, ತಿಂಗಳು ಮತ್ತು ದಿನಾಂಕ ಗೊತ್ತಿಲ್ಲ. ಅವರ ಮರಣ ಪ್ರಮಾಣ ಪತ್ರವನ್ನು ಪಡೆದಿದ್ದೇವೆ. 1956 ರಲ್ಲಿ ಪಡೆದಿಲ್ಲ. ಯಾವ ದಿನಾಂಕದಂದು ಪಡೆದಿದ್ದೇವೆ ಎಂದರೆ, ನಮ್ಮ ಅಣ್ಣ ಪಡೆದಿದ್ದಾರೆ ಎಂದು ನುಡಿಯುತ್ತಾರೆ. ಈ ದಾವೆ ಹಾಕುವ ಮುಂಚೆನೇ ಪಡೆದಿರಬೇಕು. ಅವರು ಎಲ್ಲಿಂದ ಪಡೆದುಕೊಂಡು ಬಂದರು ಎಂದರೆ, ನಾನು ಕೇಳಿಲ್ಲ.

12. ಸ.ನಂ.50 ರಲ್ಲಿ ಒಟ್ಟು 2 ಎಕರೆ 2 ಗುಂಟೆ ಇದೆ. ಸದರಿ ಜಮೀನು ಮುಂಚೆ ಯಾರ ಮಾಲೀಕತ್ವ ಮತ್ತು ಸ್ವಾಧೀನದಲ್ಲಿತ್ತು ಎಂದರೆ, ದಾಸನ ಜವರಪ್ಪ, ತಮ್ಮ, ಲಕ್ಷ್ಮಪ್ಪನ ಕಾಳ, ಪುಟ್ಟಮ್ಮ ಕೋಂ ತಿಮ್ಮ ಹಾಗೂ ನಾನು ಇದ್ದೆವು.

13. ದಾವಾ ಸ್ವತ್ತನ್ನು ನೀವು ಖರೀದಿ ಮಾಡಿದ್ದೀರಾ ಎಂದರೆ, ನಮ್ಮ ದೊಡ್ಡಪ್ಪ ದಾಸ ರವರು 1945 ರಲ್ಲಿ 30 ವರೆ ಗುಂಟೆ ಖರೀದಿ ಮಾಡಿದ್ದರು, ನಾವು ಖರೀದಿ ಮಾಡಿಲ್ಲ. ಖರೀದಿ ಮಾಡಿದ ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ. ಸದರಿ ಮೂಲ ಕ್ರಯಪತ್ರ ಯಾರ ಬಳಿ ಇದೆ ಎಂದರೆ, ವಕೀಲರಿಗೆ ಕೊಟ್ಟಿದ್ದೆ, ಅವರು ನ್ಯಾಯಾಲಯಕ್ಕೆ ನೀಡಿರುತ್ತಾರೆ. ಅದನ್ನು ನನ್ನ ಅಣ್ಣನೇ ತಂದಿದ್ದರು.

14. ಸದರಿ ಪತ್ರದಲ್ಲಿ ಬರೆದಿರುವ ಒಕ್ಕಣಿಕೆಗಳ ಬಗ್ಗೆ ನಾನು ಓದಿಲ್ಲದ ಕಾರಣ ಗೊತ್ತಿಲ್ಲ. ಅದನ್ನು ಬೇರೆಯವರಿಂದ ಓದಿಸಿ ತಿಳಿದುಕೊಂಡಿರುತ್ತೇನೆ.

15. ನನ್ನ ದೊಡ್ಡಪ್ಪ ಖರೀದಿ ಮಾಡಿದ ಜಮೀನಿನ ದಕ್ಷಿಣಕ್ಕೆಃ ಸಿದ್ದಪ್ಪ ಈಗ ಅವರ ಮಗ ಶಾಂತೇಗೌಡರ ಜಮೀನು, ಉತ್ತರಕ್ಕೆಃ ರಸ್ತೆ, ಪಶ್ಚಿಮಕ್ಕೆಃ ಹಿಟ್ನಳ್ಳಿ ರವಿ ಪುಟ್ಟೇಗೌಡ ರವರ ಜಮೀನು, ಪೂರ್ವಕ್ಕೆಃ ಸರ್ಕಾರಿ ರಸ್ತೆ. ಸದರಿ ಜಮೀನಿನ ಸ.ನಂ.50. ಪೋಡು ಗೊತ್ತಿಲ್ಲ.

16. ಸ.ನಂ.50 ರಲ್ಲಿ 1 ಮತ್ತು 2 ಎಂದು ಎರಡು ಪೋಡುಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ.

17. ಸ.ನಂ.50/1 ರಲ್ಲಿ 1 ಎಕರೆ 21 ಗುಂಟೆ ಇದೆ ಎಂದರೆ ಸರಿ. ಸ.ನಂ.50/2 ರಲ್ಲಿ ಸಹ 1 ಎಕರೆ 21 ಗುಂಟೆ ಇದೆ ಎಂದರೆ ಸರಿ.

18. ದಾವಾ ಸ್ವತ್ತು ಸ.ನಂ.50/1 ರಲ್ಲಿ ಬರುತ್ತಾ ಅಥವಾ ಸ.ನಂ.50/2 ರಲ್ಲಿ ಬರುತ್ತಾ ಎಂದರೆ, ಎಲ್ಲಾ ಒಟ್ಟಿಗೆ ಇದೆ ಎಂದು ನುಡಿಯುತ್ತಾರೆ. ನಾವು 5 ಜನ ಭಾಗ ಮಾಡಿಕೊಂಡಿರುತ್ತೇವೆ. ನನಗೆ ತಿಮ್ಮಣ್ಣ ಬಿನ್ ಕಾಳ ರವರ ಪಕ್ಕದಲ್ಲಿ ಬರುತ್ತದೆ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ